# ನಿಮ್ಮ ಆರೋಗ್ಯದ ನಿಯಂತ್ರಣವನ್ನು ನಿಮ್ಮ ಕೈಗೆ ತೆಗೆದುಕೊಳ್ಳಿ



## ಶೀಘ್ರ ಪತ್ತೆ ಮಾಡಿದಲ್ಲಿ ಸ್ತನ ಮತ್ತು ಗರ್ಭಕೋಶದ ಕೊರಳಿನ (ಸರ್ವೈಕಲ್) ಕ್ಯಾನ್ಸರ್‌ಗಳನ್ನು ಗುಣಪಡಿಸಬಹುದು.

**ಭಾ**ರತದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ ಎಂಬುದನ್ನು ನಾವು ತಿಳಿದಿದ್ದೇವೆ. 30ರಿಂದ 69 ವರ್ಷದ ವಯಸ್ಸಿನವರಲ್ಲಿ ಶೇ. 70ಕ್ಕೂ ಹೆಚ್ಚಿನ ಜನರಿಗೆ 2010ರಲ್ಲಿ ಕ್ಯಾನ್ಸರ್ ಕಾಡಿದೆ. ಇವುಗಳಲ್ಲಿ 1,93,300 ಮಹಿಳೆಯರಾಗಿದ್ದರು. ನಗರದ ಮಹಿಳೆಯರನ್ನು ಒಟ್ಟಾರೆ ಕ್ಯಾನ್ಸರ್‌ಗಳಲ್ಲಿ ಶೇ. 25ರಿಂದ 33ರಷ್ಟು ಕ್ಯಾನ್ಸರ್‌ಗಳು ಕಾಡುತ್ತವೆ. ಇವುಗಳಲ್ಲಿ ಶೇ. 50ಕ್ಕಿಂತಲೂ ಹೆಚ್ಚಿನವು 3 ಮತ್ತು 4ನೇ ಹಂತದಲ್ಲಿ ಪತ್ತೆಯಾಗುತ್ತವೆ. ಆದ್ದರಿಂದ ಶೀಘ್ರ ಪತ್ತೆ ಮಾಡುವುದು ಬಹಳ ಪ್ರಾಮುಖ್ಯತೆ ಹೊಂದಿರುತ್ತದೆ.

ಕೆಲವು ಕ್ಯಾನ್ಸರ್‌ಗಳು ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಗರ್ಭಕೋಶದ ಕೊರಳಿನ ಕ್ಯಾನ್ಸರ್ ಮಹಿಳೆಯರಲ್ಲಿ ಅತ್ಯಂತ ಸಾಮಾನ್ಯವಾದ ಕ್ಯಾನ್ಸರ್ ಆಗಿದೆ. ಸ್ತನ ಕ್ಯಾನ್ಸರ್ ನಂತರದ ಸಾಮಾನ್ಯ ಸ್ಥಾನ ಪಡೆದಿದೆ. ಶ್ವಾಸಕೋಶದ ಕ್ಯಾನ್ಸರ್ ಬಳಿಕ ಮಹಿಳೆಯರಲ್ಲಿ 2ನೇ ಅತ್ಯಂತ ಸಾಮಾನ್ಯವಾದ ಸಾವಿನ ಕಾರಣ ಇದಾಗಿದೆ. ಹಾಗೂ 45ರಿಂದ 55 ವರ್ಷ ವಯಸ್ಸಿನ ಮಹಿಳೆಯರಲ್ಲಿ ಸಾವಿನ ಪ್ರಮುಖ ಕಾರಣ ಇದಾಗಿದೆ.

ಗ್ರಾಮೀಣ ಮಹಿಳೆಯರಲ್ಲಿ ಗರ್ಭಕೋಶದ ಕೊರಳಿನ ಕ್ಯಾನ್ಸರ್ ಅತ್ಯಂತ ಸಾಮಾನ್ಯವಾಗಿದ್ದು ನಗರಗಳ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚು ಸಾಮಾನ್ಯವಾಗಿ ಕಂಡುಬರುತ್ತದೆ.

ಹೆಚ್ಚಿನ ಸಂಖ್ಯೆಯ ಲೈಂಗಿಕ ಪಾಲುದಾರರನ್ನು ಹೊಂದಿರುವ ಮಹಿಳೆಯರಲ್ಲಿ ಗರ್ಭಕೋಶದ ಕೊರಳಿನ ಕ್ಯಾನ್ಸರ್ ಹೆಚ್ಚು ಸಾಮಾನ್ಯವಾಗಿ ಕಂಡುಬರುತ್ತದೆ ಅಲ್ಲದೆ ನಿರ್ದಿಷ್ಟವಾದ ಮಾದರಿಯ ವೈರಸ್‌ಗಳಿಂದ ಉಂಟಾಗುತ್ತದೆ. ಸ್ತನ ಕ್ಯಾನ್ಸರ್ ಬೊಜ್ಜು ಮೈವುಳ್ಳ ಹಾಗೂ ಮಕ್ಕಳಿಲ್ಲದಿರುವ, ಮಕ್ಕಳಿಗೆ ಎದೆಹಾಲುಣಿಸದಿರುವ, 30 ವರ್ಷಗಳ ವಯಸ್ಸಿನ ನಂತರ ಮೊದಲ ಮಗು ಹೊಂದಿರುವ, ಒಸಿ ಪಿಲ್ ಮತ್ತು ಎಚ್‌ಆರ್‌ಟಿ ಚಿಕಿತ್ಸೆ ಮೇಲಿರುವ ಹಾಗೂ ಸ್ತನ ಕ್ಯಾನ್ಸರ್‌ನ ಕುಟುಂಬ ಇತಿಹಾಸ ಹೊಂದಿರುವ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ.

ಸ್ತನ ಕ್ಯಾನ್ಸರ್ ಪತ್ತೆ ಹಚ್ಚಲು ಎಫ್‌ಎನ್‌ಎಸಿ/ಬಯಾಪ್ಸಿ, ಮ್ಯಾಮೊಗ್ರಾಮ್ ಯುಎಸ್‌ಜಿ ಬ್ರೆಸ್ಟ್ ಅಲ್ಲದೆ ಕೆಲವೊಮ್ಮೆ ಎಂಆರ್‌ಐ ಸ್ಕ್ಯಾನ್ ನಡೆಸಲಾಗುತ್ತದೆ.

ಇತ್ತೀಚೆಗಿನ ತಂತ್ರಜ್ಞಾನದಲ್ಲಿನ ಔನ್ನತ್ಯೀಕರಣ ಮತ್ತು ಶಸ್ತ್ರಕ್ರಿಯಾ ಕೌಶಲ್ಯಗಳ ಸುಧಾರಣೆಗಳಿಂದ ಸ್ತನ ಕ್ಯಾನ್ಸರ್‌ನ ಚಿಕಿತ್ಸೆ ಉತ್ತಮ ಫಲಿತಾಂಶಗಳನ್ನು ನೀಡುತ್ತಿರುವುದಲ್ಲದೆ ಹೆಚ್ಚಿನ ಸಂಖ್ಯೆಯ ಮಹಿಳೆಯರು ತಮ್ಮ ಸ್ತ್ರತ್ವ ಮತ್ತು ದೇಹದ ವರ್ಚಸ್ಸನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ.

**ನಮ್ಮ ದೇಹದಲ್ಲಿನ ಬದಲಾವಣೆಯ ಬಗ್ಗೆ ಜಾಗೃತಿ ಹೊಂದಿರುವುದರಿಂದ ನಾವು ಸಕ್ರಿಯವಾಗಿದ್ದು ನಮ್ಮ ಆರೋಗ್ಯದ ನಿಯಂತ್ರಣವನ್ನು ನಮ್ಮ ಕೈಗೆ ತೆಗೆದುಕೊಳ್ಳಬಹುದು.**

ಸ್ತನ ಸಂರಕ್ಷಣಾ ಶಸ್ತ್ರಚಿಕಿತ್ಸೆಯನ್ನು ಬಹುತೇಕ ರೋಗಿಗಳು ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ನಲ್ಲಿ ಗಡ್ಡೆಯ ಗಾತ್ರವನ್ನು ಆಧರಿಸಿ ಆರಿಸಿಕೊಳ್ಳುತ್ತಾರೆ. ಈ ರೀತಿಯ ಶಸ್ತ್ರಚಿಕಿತ್ಸೆಯಲ್ಲಿ ಸ್ತನದಲ್ಲಿನ ಗಡ್ಡೆಯನ್ನು ತೆಗೆದುಹಾಕಿ ಕಂಕುಳಲ್ಲಿನ ಕೊಬ್ಬನ್ನು ತೆಗೆಯಲಾಗುತ್ತದೆ. ಆದರೆ ಸಂಪೂರ್ಣ ಸ್ತನವನ್ನು ತೆಗೆದುಹಾಕುವುದಿಲ್ಲ.

ಸ್ತನ ಸಂರಕ್ಷಣಾ ಶಸ್ತ್ರಚಿಕಿತ್ಸೆಯನ್ನು ವಿಶೇಷ ಸೇವೆಯಾಗಿ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ ನೀಡುತ್ತಿದ್ದು ನೂತನ ಕಿಮೋಥೆರಪಿ ಮತ್ತು ಹಾರ್ಮೋನ್‌ಥೆರಪಿ ಔಷಧಗಳ ಆಗಮನದೊಂದಿಗೆ ಸ್ತನ ಕ್ಯಾನ್ಸರ್‌ನ ಚಿಕಿತ್ಸೆ ಬಹಳಷ್ಟು ಸರಳವಾಗಿದ್ದು ಹೆಚ್ಚು ಉತ್ತಮವಾದ ಫಲಿತಾಂಶಗಳಿಗೆ ಕಾರಣವಾಗಿದೆ.

ಇದಲ್ಲದೆ ಜಗತ್ತಿನ ಅತ್ಯಂತ ಉನ್ನತವಾದ ವಿಕಿರಣ ಚಿಕಿತ್ಸಾ ತಂತ್ರಜ್ಞಾನವಾದ ಟ್ರೂಬೀಮ್ ಎಸ್‌ಟಿಎಕ್ಸ್ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ನ



ಲೇಖಕರು :
**ಡಾ॥ ಜಯಂತಿ ತುಮ್ಸಿ**
ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು
ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್
ದೂ : 94834 00000

ಬಿಜಿಎಸ್ ಗ್ಲೋಬಲ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಆರಂಭಿಸಲಾಗಿದ್ದು ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿ ತನ್ನ ರೀತಿಯ ಮೊಟ್ಟಮೊದಲ ಸೌಲಭ್ಯ ಇದಾಗಿದೆ. ಈ ಯಂತ್ರ ಸ್ತನದಲ್ಲಿ ಕ್ಯಾನ್ಸರ್ ಹೊಂದಿರುವ ನಿರ್ದಿಷ್ಟ ಪ್ರದೇಶವನ್ನು ನಿಖರವಾಗಿ ಗುರಿಯಾಗಿಟ್ಟುಕೊಳ್ಳುತ್ತದೆಲ್ಲದೆ ಸುತ್ತಮುತ್ತಲ ಸಾಮಾನ್ಯ ಅಂಗಾಂಶಗಳನ್ನು ಸಂರಕ್ಷಿಸಿ ವಿಕಿರಣ ಚಿಕಿತ್ಸೆ ನೀಡುತ್ತದೆ. ಇದರಿಂದ ದುಷ್ಪರಿಣಾಮಗಳನ್ನು ಅಪಾರವಾಗಿ ಕಡಿಮೆ ಮಾಡುತ್ತದೆ.

ಈ ಮೂಲಕ ಚಿಕಿತ್ಸೆ ಇತರೆ ಸಾಮಾನ್ಯ ವಿಕಿರಣ ಚಿಕಿತ್ಸೆಯ ಯಂತ್ರಗಳಿಗೆ ಹೋಲಿಸಿದರೆ ಅಚ್ಚರಿ ಮೂಡಿಸುವಷ್ಟು ಕ್ಷಿಪ್ರಗತಿಯಲ್ಲಿರುತ್ತದೆ. ಈ ತಂತ್ರಜ್ಞಾನ ಚಿಕಿತ್ಸೆಯಲ್ಲಿ ಅದ್ಭುತವಾದ ವೇಗ, ನಿಖರತೆಯನ್ನು ತಂದಿದೆ.

ಸ್ತನ ಮತ್ತು ಗರ್ಭಕೋಶದ ಕೊರಳಿನ ಕ್ಯಾನ್ಸರ್‌ಗಳನ್ನು ತಡೆಯಲು ಅಸಾಧ್ಯ. ಆದರೆ ಶೀಘ್ರ ಪತ್ತೆ ಹಾಗೂ ಶೀಘ್ರ ಚಿಕಿತ್ಸೆಯಿಂದ ಪರಿಹಾರ ಸಾಧ್ಯ.

20 ವರ್ಷಗಳಿಗೂ ಮೇಲ್ಪಟ್ಟ ಎಲ್ಲಾ ಮಹಿಳೆಯರು ಸ್ತನ ಪರೀಕ್ಷೆಯ ಕ್ರಮವನ್ನು ಕಲಿತುಕೊಳ್ಳುವ ಅಗತ್ಯವಿದೆ. ಹಾಗೂ ನಿಗದಿತ ಅವಧಿಯಲ್ಲಿ ಸ್ತನ ಶಸ್ತ್ರಚಿಕಿತ್ಸಾ ತಜ್ಞರಿಂದ ಪರೀಕ್ಷೆ ಮಾಡಿಸಿಕೊಳ್ಳಬೇಕು. ಹೆಚ್ಚುವರಿಯಾಗಿ 40 ವರ್ಷ ಮೇಲ್ಪಟ್ಟ ಮಹಿಳೆಯರು ವರ್ಷಕ್ಕೊಮ್ಮೆ ಮ್ಯೊಮೊಗ್ರಾಮ್ ತಪಾಸಣೆ ಹಾಗೂ ಮೂರು ವರ್ಷದಲ್ಲಿ ಒಮ್ಮೆ ಪ್ಯಾಪ್ ಸ್ಮಿಯರ್ ಪರೀಕ್ಷೆಗೆ ಒಳಪಡುವ ಅಗತ್ಯವಿದೆ. ಇದರಿಂದ ರೋಗವನ್ನು ಅದರ ಲಕ್ಷಣಗಳು ಕಾಣಿಸಿಕೊಳ್ಳುವ ಮುನ್ನವೇ ಪತ್ತೆ ಮಾಡಲು ಸಾಧ್ಯವಿರುತ್ತದೆ.

ಸ್ತನ ಕ್ಯಾನ್ಸರ್ ಮತ್ತು ಗರ್ಭಕೋಶದ ಕೊರಳಿನ ಕ್ಯಾನ್ಸರ್‌ಗಳನ್ನು ಶೀಘ್ರವಾಗಿ ಪತ್ತೆ ಮಾಡಿ ಚಿಕಿತ್ಸೆ ನೀಡಿದಲ್ಲಿ ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ. ನಮ್ಮ ಆರೋಗ್ಯದ ನಿಯಂತ್ರಣವನ್ನು ನಾವೇ ಕೈಗೆತ್ತಿಕೊಳ್ಳೋಣ. ಇದು ನಮ್ಮ ಕೈಯಲ್ಲಿಯೇ ಇದೆ.

Advt